10 ಎಸೆತಗಳಲ್ಲಿ ತಲುಪಿದರು. ಆ ಪ್ರಯಾಣದಲ್ಲಿ ಅಫ್ಘಾನಿಸ್ತಾನದ ಪ್ರಭಾವಿ ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರ ಒಂದು ಓವರ್‌ನಲ್ಲಿ ಅವರಾಡಿದ ಆಟವಂತೂ ತುಂಬಾ ಮುಖ್ಯ. 6, 6, 4, 6, 6– ಸತತವಾಗಿ ಇಂತಹ ಸ್ಕೋರ್ ಅನ್ನು ದಿಗ್ಗಜ ಸ್ಪಿನ್ನರ್‌ಗೆ ಜಾಕ್ಸ್ ಹೊಡೆದರು. ಅವರು ಆಫ್‌ಸ್ಟಂಪ್‌ನ ಆಚೆಗೆ ಬಿದ್ದಿದ್ದ ಚೆಂಡೊಂದನ್ನು ಲೆಗ್‌ಸೈಡ್‌ನತ್ತ ಸಿಕ್ಸರ್‌ಗೆ ಹೊಡೆದಾಗ ಹೊಮ್ಮಿದ ಶಬ್ದ ಕಂಡು ವಿರಾಟ್ ಕೊಹ್ಲಿ ಕೂಡ ಕಣ್ಣರಳಿಸಿ ಬಾಯಿ ಮುಚ್ಚಿಕೊಂಡರು. ಆ ರೀತಿಯ ಪವರ್ ಹಿಟ್ಟಿಂಗ್ ನೋಡಲು ಸಿಗುವುದು ಅಪರೂಪದಲ್ಲಿ ಅಪರೂಪ ಎಂದು ಅವರು ಕೊಂಡಾಡಿದ್ದರು.

ಬ್ಯಾಟಿಂಗ್ ಕೊಡುವ ಮುದದ ಕ್ಷಣಗಳ ಕುರಿತು ಮಾತನಾಡುವಾಗ ಎಂಥವರೂ ಹೀಗೆ ಬೌಲರ್‌ಗಳ ವಿಷಯದಲ್ಲಿ ನಿರ್ದಯಿಗಳಾಗಿಬಿಡುತ್ತೇವೆ. ರಶೀದ್ ಖಾನ್ ಅವರಿಗೆ ಇದುವರೆಗೆ ಐಪಿಎಲ್‌ನಲ್ಲಿ ಯಾರೂ ಇಷ್ಟೊಂದು ರನ್‌ಗಳನ್ನು ಒಂದು ಓವರ್‌ನಲ್ಲಿ ಹೊಡೆದಿರಲಿಲ್ಲ.

ಇದರ ಅರ್ಥ– ಚೆಂಡು ತಿರುಗಲಿ ಬಿಡಲಿ; ಎಸೆತದ ವೇಗದಲ್ಲಿ ಎಂಥದ್ದೇ ವೈವಿಧ್ಯ ಇರಲಿ; ಸ್ವಿಂಗ್ ಹೇಗೇ ಬರಲಿ; ಬೌಲರ್ ಬುಡಕ್ಕೆ ಹಾಕಲಿ... ಸಿಕ್ಸರ್‌ಗಳನ್ನು ಹೊಡೆಯುವ ತಯಾರಿಯನ್ನು ಎಂತೆಂಥ ಬ್ಯಾಟ್ಸ್‌ಮನ್‌ಗಳೂ ಮಾಡುತ್ತಿದ್ದಾರೆ.


ಗೆಲುವಿನ ರೂವಾರಿ ವಿಲ್ ಜಾಕ್ಸ್‌ಗೆ ವಿರಾಟ್ ಕೊಹ್ಲಿ ಮೆಚ್ಚುಗೆ

ಈ ಸಲದ ಐಪಿಎಲ್ ಋತುವಿನ ಮೊದಲ ಹತ್ತು ಪಂದ್ಯಗಳನ್ನು ಪರಿಗಣಿಸೋಣ. ಶ್ರೇಷ್ಠ ಎಕಾನಮಿ ರೇಟ್ ಇರುವ ಬೌಲರ್‌ಗಳು ಯಾರೆಂದು ಪಟ್ಟಿಯ ಮೇಲೆ ಕಣ್ಣಾಡಿಸಿದರೆ ಅಚ್ಚರಿಯಾಗುತ್ತದೆ. ಅಪರೂಪಕ್ಕೆ ಬೌಲಿಂಗ್ ಮಾಡುವ ರಚಿನ್ ರವೀಂದ್ರ ಓವರ್‌ಗೆ ಸರಾಸರಿ 3.5 ರನ್ ನೀಡಿದ್ದಾರೆ. ಆಯುಷ್ ಬಡೋನಿ ಆನಂತರದ ಸ್ಥಾನದಲ್ಲಿ ಇದ್ದರೆ (ಎಕಾನಮಿ ರೇಟ್ 6), ಲಿವಿಂಗ್‌ಸ್ಟೋನ್ 6.22ರ ಸರಾಸರಿಯಲ್ಲಿ ಪ್ರತಿ ಓವರ್‌ಗೆ ರನ್ ನೀಡಿದ್ದಾರೆ. ಇವರು ಯಾರೂ ಪೂರ್ಣ ಪ್ರಮಾಣದ ಬೌಲರ್‌ಗಳು ಅಲ್ಲ. ನಂತರದ ಸ್ಥಾನದಲ್ಲಿ ಜಸ್‌ಪ್ರೀತ್ ಬೂಮ್ರಾ, ದೀಪಕ್ ಹೂಡಾ ಹಾಗೂ ಕೇಶವ ಮಹಾರಾಜ್ ಇದ್ದಾರೆ (ಕ್ರಮವಾಗಿ 6.40, 6.50, 6.50).

ಇದುವರೆಗೆ ಐಪಿಎಲ್‌ನ ಎಲ್ಲ ಋತುಗಳಲ್ಲೂ ಅತಿ ಹೆಚ್ಚು ಸಿಕ್ಸರ್‌ಗಳನ್ನು ಕೊಟ್ಟಿರುವ ಬೌಲರ್‌ಗಳು ಯಾರು ಎಂದು ಗಮನಿಸಿದರೆ, ದಿಗ್ಗಜರ ಹೆಸರುಗಳೇ ಕಾಣುತ್ತವೆ. ಪಿಯೂಷ್ ಚಾವ್ಲಾ 211 ಸಿಕ್ಸರ್‌ಗಳನ್ನು ಹೊಡೆಸಿಕೊಂಡಿದ್ದಾರೆ. ಯಜುವೇಂದ್ರ ಚಾಹಲ್ 201, ರವೀಂದ್ರ ಜಡೇಜಾ 198, ರವಿಚಂದ್ರನ್ ಅಶ್ವಿನ್ 189, ಅಮಿತ್ ಮಿಶ್ರಾ 181, ಡ್ವೇನ್ ಬ್ರಾವೋ 155, ಸುನೀಲ್ ನಾರಾಯಣ 155 ಸಿಕ್ಸರ್‌ಗಳನ್ನು ಹೊಡೆಸಿಕೊಂಡಿದ್ದಾರೆ. ಈ ಋತುವಿನಲ್ಲಿ ಐಪಿಎಲ್ ಆಡುತ್ತಿರುವ ಚಾಹಲ್, ಜಡೇಜಾ, ಅಶ್ವಿನ್, ಸುನೀಲ್ ಇನ್ನಷ್ಟು ಸಿಕ್ಸರ್‌ಗಳನ್ನು ಹೊಡೆಸಿಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಋತುವಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ನ ಆ್ಯನ್ರಿಚ್ ನೋಕಿಯೆ ಬರೀ 4 ಇನಿಂಗ್ಸ್‌ಗಳಲ್ಲಿ 17 ಸಿಕ್ಸರ್‌ಗಳನ್ನು ಹೊಡೆಸಿಕೊಂಡಿದ್ದರು. ಆರ್‌ಸಿಬಿಯ ಮೊಹಮ್ಮದ್ ಸಿರಾಜ್ 6 ಇನಿಂಗ್ಸ್‌ಗಳಲ್ಲಿ 16 ಸಿಕ್ಸರ್‌ಗಳನ್ನು ಕೊಟ್ಟು, ಮಂಕಾಗುತ್ತಾ ಹೋದರು. ಕಳೆದ ಋತುವಿನಲ್ಲಿ ಬ್ಯಾಟರ್‌ಗಳನ್ನು ತಮ್ಮ ವೇಗ ವೈವಿಧ್ಯದಿಂದ ಕೆಣಕಿದ್ದ ಕೋಲ್ಕತ್ತ ನೈಟ್‌ರೈಡರ್ಸ್‌ನ ವರುಣ್ ಚಕ್ರವರ್ತಿ ಈ ಸಲ 4 ಇನಿಂಗ್ಸ್‌ಗಳಲ್ಲೇ 12 ಸಿಕ್ಸರ್‌ಗಳನ್ನು ಕೊಟ್ಟರು. ಮುಂಬೈ ಇಂಡಿಯನ್ಸ್‌ನ ವೇಗಿ ಕೊಯೆಟ್ಜಿ 5 ಇನಿಂಗ್ಸ್‌ಗಳಲ್ಲಿಯೇ 12 ಸಿಕ್ಸರ್‌ಗಳನ್ನು ಚಚ್ಚಿಸಿಕೊಂಡರೆ, ಸನ್‌ರೈಸರ್ಸ್ ಹೈದರಾಬಾದ್ ಬೌಲರ್ ಮಯಂಕ್ ಮಾರ್ಕಂಡೆ 4 ಇನಿಂಗ್ಸ್‌ಗಳಲ್ಲಿ 11 ಸಿಕ್ಸರ್ ಚಚ್ಚಿಸಿಕೊಂಡು ಸುಸ್ತು ಹೊಡೆದರು.

ನಾಲ್ಕು ಓವರ್‌ಗಳಲ್ಲಿ ಬೌಲರ್‌ಗಳು ತಮ್ಮ ಕರಾಮತ್ತನ್ನು ತೋರಲೇಬೇಕಾದ ಅನಿವಾರ್ಯ ಐಪಿಎಲ್‌ನಲ್ಲಿ ಇದೆ. ಅದರಲ್ಲೂ ಕೊನೆಯ ಓವರ್‌ಗಳನ್ನು ಬೌಲ್ ಮಾಡುವ ವೇಗದ ಬೌಲರ್‌ಗಳಿಗೆ ಸವಾಲು ಹೆಚ್ಚು. ಇದನ್ನು ಬಹಳ ಸೊಗಸಾಗಿ ನಿಭಾಯಿಸಿದವರು ಜಸ್‌ಪ್ರೀತ್ ಬೂಮ್ರಾ. ಅವರು ಮೊದಲ ಏಳೆಂಟು ಪಂದ್ಯಗಳಲ್ಲಿ ಸರಾಸರಿ 11ಕ್ಕೂ ಹೆಚ್ಚು ಡಾಟ್‌ಬಾಲ್‌ಗಳನ್ನು ಹಾಕಿದ್ದು, ಬೌಲರ್‌ಗಳ ಸಂಕಷ್ಟದ ಈ ಸಮಯದಲ್ಲೂ ಮೆಚ್ಚತಕ್ಕ ಸಂಗತಿ.

ಬೂಮ್ರಾ ಈ ಸಲ ಮೇ 2ರವರೆಗೆ ನಡೆದ ಪಂದ್ಯಗಳಲ್ಲಿ 14 ವಿಕೆಟ್‌ಗಳನ್ನು ಕಿತ್ತರು. ಅದರಲ್ಲಿ ಒಂದು ಐದು ವಿಕೆಟ್‌ಗಳ ಗೊಂಚಲು ಸೇರಿದೆ. ಅವರ ಎಕಾನಮಿ 6.40 ಎಂಥವರಿಗೂ ಬೆರಗಿನಂತೆ ಕಂಡೀತು. ಅವರಂತೆಯೇ ವಿಕೆಟ್ ಗಳಿಕೆಯಲ್ಲಿ ಮುಂಚೂಣಿಯಲ್ಲಿರುವ, ಪಂಜಾಬ್ ಕಿಂಗ್ಸ್‌ನ ಹರ್ಷಲ್ ಪಟೇಲ್ ಹಾಗೂ ಚೆನ್ನೈ ಸೂಪರ್‌ಕಿಂಗ್ಸ್‌ನ ಮುಸ್ತಫಿಜುರ್ ರೆಹಮಾನ್ ಇಬ್ಬರ ಎಕಾನಮಿ ಕ್ರಮವಾಗಿ 10.24 ಹಾಗೂ 9.26 ಇದೆ. 13 ವಿಕೆಟ್‌ಗಳನ್ನು ಕಿತ್ತಿರುವ ಪಂಜಾಬ್ ತಂಡದ ಅರ್ಷದೀಪ್ ಸಿಂಗ್ ಕೂಡ 10.01ಕ್ಕಿಂತ ಹೆಚ್ಚು ರನ್‌ಗಳನ್ನು ಪ್ರತಿ ಓವರ್‌ನಲ್ಲಿ ನೀಡಿದ್ದಾರೆ. ಕೊಯೆಟ್ಜಿ (10.06), ಮುಕೇಶ್ ಕುಮಾರ್ (11.05) ಕೂಡ ದುಬಾರಿಯಾದರೂ 13 ವಿಕೆಟ್‌ಗಳನ್ನು ಕಿತ್ತವರ ಪಟ್ಟಿಯಲ್ಲಿದ್ದಾರೆ.

ಚೆನ್ನೈ ಸೂಪರ್‌ಕಿಂಗ್ಸ್ ತಂಡದ ಮತ್ತೊಬ್ಬ ಪ್ರತಿಭೆ ಮತೀಶ ಪತಿರಾಣಾ (7.68) ಎಕಾನಮಿ ರೇಟ್ ಮಾತ್ರ ಚೆನ್ನಾಗಿದೆ. ಅವರೂ ಮೇ 2ರವರೆಗಿನ ಪಂದ್ಯಗಳಲ್ಲಿ 13 ವಿಕೆಟ್‌ಗಳನ್ನು ಪಡೆದಿದ್ದಾರೆ. ಲಾಸಿತ್ ಮಾಲಿಂಗ ಶೈಲಿಯಲ್ಲಿ ಬೌಲ್ ಮಾಡುವ ಇವರನ್ನು ಸಶಕ್ತ ಆಯುಧವನ್ನಾಗಿ ಮಾಡಿದವರು ಮಹೇಂದ್ರ ಸಿಂಗ್ ಧೋನಿ.

ಸನ್‌ರೈಸರ್ಸ್ ಹೈದರಾಬಾದ್ ತಂಡದ ಯಾರ್ಕರ್ ಸ್ಪೆಷಲಿಸ್ಟ್ ಟಿ. ನಟರಾಜನ್ ಕೂಡ 13 ವಿಕೆಟ್ ಪಡೆದಿರುವರಾದರೂ ಅವರ ಎಕಾನಮಿ ರೇಟ್ 9 ಇದೆ. ಅವರಿಗೆ ವಿಕೆಟ್ ಗಳಿಕೆ, ಎಕಾನಮಿ ಎರಡರಲ್ಲೂ ಸಮನಾಗಿ ಇರುವವರು, ರಾಜಸ್ಥಾನ ರಾಯಲ್ಸ್ ತಂಡದ ಯಜುವೇಂದ್ರ ಚಾಹಲ್.

ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಚಾಹಲ್ ಹೊರತಾಗಿ ಬೇರೆ ಯಾವ ಸ್ಪಿನ್ನರ್ ಕೂಡ ಇಲ್ಲ. ಇದನ್ನು ನೋಡಿದರೆ, ಚುಟುಕು ಕ್ರಿಕೆಟ್‌ನಲ್ಲಿ ಆರ್. ಅಶ್ವಿನ್ ತರಹದವರಿಗೆ ಯಾಕೆ ಉಳಿಗಾಲವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ವಿಶ್ವಕಪ್ ಟ್ವೆಂಟಿ20 ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿರುವ ರೋಹಿತ್ ಶರ್ಮ ಹೊಸದಾಗಿ ಇಂಪ್ಯಾಕ್ಟ್ ಪ್ಲೇಯರ್ ನಿಯಮ ಪರಿಚಿತವಾದಾಗ, ಅದನ್ನು ಖಂಡಿಸಿದ್ದರು. ತಂಡವೊಂದರ ತಾಳ–ಮೇಳವನ್ನು ನಾಯಕ ಕಂಡುಕೊಳ್ಳುವಲ್ಲಿ, ಆಲ್‌ರೌಂಡರ್‌ಗಳನ್ನು ನಿಕಷಕ್ಕೆ ಒಡ್ಡುವಲ್ಲಿ ಈ ನಿಯಮ ಎಡರಾಗಿ ಪರಿಣಮಿಸಲಿದೆ ಎಂದು ಅವರು ಹೇಳಿದ್ದರು. ಅಂಕಿಅಂಶಗಳನ್ನು ನೋಡಿದರೆ, ಏರುತ್ತಿರುವ ಸಿಕ್ಸರ್‌ಗಳ ಸಂಖ್ಯೆಯ ಮೇಲೆ ಕಣ್ಣಾಡಿಸಿದರೆ ಅವರ ಈ ಕಳವಳಕ್ಕೆ ಇರುವ ಕಾರಣ ಸ್ಪಷ್ಟವಾದೀತು.

ಐಪಿಎಲ್ ಮನರಂಜನೆಯಲ್ಲಿ ಮಿಂದೇಳುತ್ತಿರುವ ಅಭಿಮಾನಿಗಳಿಗೆ ಹೊಡಿ–ಬಡಿ ಆಟವಷ್ಟೇ ಸಾಕು. ಬೌಲರ್‌ಗಳ ಅಳು ಅವರಿಗೇಕೆ ಬೇಕು?

ಪ್ರತಿಕ್ರಿಯಿಸಿ: feedback@sudha.co.in